ಪ್ರಶ್ನೆಯೇ ಇಲ್ಲ. ಅದಷ್ಟು ಬೇಗ ಅದನು ಪೂರ್ಣಗೊಳಿಸುತ್ತೇವೆ. ಅದು ಶಿವಮೊಗ್ಗ ಮತ್ತು ಬೆಂಗಳೂರಿನ ಹೆದ್ದಾರಿಯಲ್ಲಿರುವುದರಿಂದ ಅಲ್ಲಿ ಸಮಸ್ಯೆ ಇದೆ. ಆ ಸಮಸ್ಯೆಯನ್ನು ಆದಷ್ಟು ಬಏಗ ಪರಿಹಾರ ಮಾಡುತ್ತೇವೆ. ಅಲ್ಲಿ ಬಹಳ ಹಳೆಯ ಬಸ್ಸುಗಳಿದ್ದು ಅಲ್ಲಾಡುತ್ತಿವೆ ಎಂದು ಹೇಳಿದ್ದಾರೆ. ಅವುಗಳನ್ನೆಲ್ಲ ತೆಗೆದು ಹಾಕುತ್ತೇವೆ.

**ಹೆಜಮಾಡಿ ಕಡಲನ್ನು ಪ್ರವಾಸೋದ್ಯಮವಾಗಿ ಅಭಿವೃದ್ಧಿ ಪಡಿಸುವುದು.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 27 (211): ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)

ಮಾನ್ಯ ಪ್ರವಾಸೋದ್ಯಮ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರೆಶ್ನೆಗಳಿಗೆ ಉತ್ತರಿಸುವರೇ?

ಅ) ಹೆಜಮಾಡಿ ಬಂದರನ್ನು ಕೇಂದ್ರ ಸರ್ಕಾರ ಸರ್ವಋತು ಬಂದರಾಗಿ ಅಭಿವೃದ್ಧಿ ಪಡಿಸುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ ಸರ್ಕಾರವು ಈ ಪ್ರದೇಶವನ್ನು ಪ್ರವಾಸೋದ್ಯಮವನ್ನಾಗಿ ಅಭಿವೃದ್ಧಿ ಪಡಿಸಲು ಯೋಜನೆ ಸಿದ್ಧಪಡಿಸಿಕೊಂಡಿದೆಯೇ:

ಇ) ಹಾಗಾದಲ್ಲಿ ಇದರ ಅಂದಾಜು ವೆಚ್ಚವೆಷ್ಟು?

**ಶ್ರೀ ಬಿ.ಶ್ರೀರಾಮುಲು ಪ್ರವಾಸೋದ್ಯಮ ಅಭಿವೃದ್ಧಿ ಸಚಿವರು**

ಅ) ಇಲ್ಲ

ಆ) ಬಂದರುಗಳನ್ನು ಪ್ರವಾಸಿ ತಾಣವನ್ನಾಗಿ ಮಾಡುವ ಯೋಜನೆ ಪ್ರವಾಸೋದ್ಯಮ ಇಲಾಖೆಯ ಮುಂದೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ

**ಶ್ರೀ ಲಾಲಾಜಿ ಆರ್.ಮೆಂಡನ್:** ಮಾನ್ಯ ಅಧ್ಯಕ್ಷರೆ, ನಮ್ಮ ಕಾಪು ಕ್ಷೇತ್ರದ ಹೆಜಮಾಡಿ ಬಂದು ಬಳಿ ಪ್ರೇಕ್ಷಣೀಯ ಸ್ಥಳವಾದ ಕರಾವಳಿ ಪ್ರದೇಶವಿದೆ. ಅದನ್ನು ಪ್ರವಾಸೋದ್ಯಮ ಇಲಾಖೆಯವರು ಅಭಿವೃದ್ಧಿಪಡಿಸಲಿಕ್ಕೆ ವಿಪುಲವಾದ ಅವಕಾಶವಿದೆ. ಹೆಜಮಾಡಿ ಬಂದರಿಗೆ ಹಿಂದೆ ಆರಂಭಿಕ ಹಂತದಲ್ಲಿ ಸುಮಾರು 1 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅವರು ಬಂದರು ಪ್ರದೇಶವನ್ನು ಸ್ವಲ್ಪ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಿದ್ದಾರೆ. ಸುಮಾರು ರೂ 87 ಕೋಟಿಯನ್ನು ಇನ್ನೊಂದು ಪ್ರಸ್ತಾವನೆಯನ್ನು ಈಗಾಗಲೇ ಪೂನಾದಿಂದ ಬಂದರು ಇಲಾಖೆಯಿಂದ ಸರ್ವೆ ಮಾಡಿಸಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಆ ಪ್ರದೇಶದ ಜೊತೆಗೆ ಪ್ರವಾಸೋದ್ಯಮವನ್ನು ಕೂಡ ಅಭಿವೃದ್ಧಿಪಡಿಸಿದರೆ ಹೆಜಮಾಡಿ ಮತ್ತು ಕಾಪು ಪ್ರದೇಶ ಇವೆಲ್ಲ ಕೇರಳ ಮತ್ತು ಗೋವಾ ಮಾದರಿಯಲ್ಲಿ ಒಳ್ಳೆಯ ರೀತಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಬಹುದು.

ಒಂದು ಸಲ ಕರಾವಳಿ ಜಿಲ್ಲೆಗೆ ಭೇಟಿ ಕೊಟ್ಟು ನಮ್ಮ ಪ್ರವಾಸಿ ಕೇಂದ್ರದ ಆಯ್ದ ಪ್ರದೇಶಗಳನ್ನೆಲ್ಲ ಅಭಿವೃದ್ಧಿಪಡಿಸಬೇಕೆಂದು ಈಗಾಗಲೇ ಸಂಬಂಧಪಟ್ಟ ನಮ್ಮ ಮಾನ್ಯ ಮಂತ್ರಿಯವರಿಗೆ ವಿನಂತಿ ಮಾಡಿದ್ದೆ. ಈಗಾಗಲೇ ನಮ್ಮ ಕಾಪುವಿನಲ್ಲಿ ಕೂಡ ಹಿಂದೆ ಬ್ರಿಟಿಷರು ಕಟ್ಟಿದಂಥ ದೀಪಸ್ಥಂಭ ಇದೆ. ಆ ಭಾಗ ಕೂಡ ಪ್ರವಾಸೋದ್ಯಮಕ್ಕೆ ಅನುಕೂಲವಾಗಿದ್ದು, ಈಗಾಗಲೇ ಸಾವಿರಾರು ಜನರು ಅಲ್ಲಿಗೆ ಬಂದು ಹೋಗುತ್ತಿದ್ದಾರೆ. ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಈ ದೃಷ್ಟಿಯಿಂದ ಹೆಜಮಾಡಿ ಮತ್ತು ಕರಾವಳಿಯ ಎಲ್ಲಾ ಪ್ರದೇಶಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸಬೇಕಾಗಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಬಿ.ಶ್ರೀ ರಾಮುಲು:** ಮಾನ್ಯ ಅಧ್ಯಕ್ಷರೆ, ಆ ಸ್ಥಳಗಳನ್ನು ಅಭಿವೃದ್ಧಿಪಡಿಸಿ ಪ್ರವಾಸೋದ್ಯಮ ಮಾಡಲಿಕ್ಕೆ ನಮ್ಮ ಸರ್ಕಾರದಲ್ಲಿ, ನಮ್ಮ ಇಲಾಖೆಯಲ್ಲಿ ಆ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಬಂದರು ಅಭಿವೃದ್ಧಿಪಡಿಸಲಿಕ್ಕೆ, ಅದೇ ರೀತಿಯಾಗಿ ಪ್ರವಾಸೋದ್ಯಮ ಮಾಡಲಿಕ್ಕೆ ನಮ್ಮ ಶಾಸಕರು ಯಾವ ರೀತಿಯಲ್ಲಿ ನಮಗೆ ಸರ್ಕಾರಕ್ಕೆ, ನಮ್ಮ ಇಲಾಖೆಗೆ ಮಾಹಿತಿಯನ್ನು ಕೊಡುತ್ತಾರೋ, ಆ ರೀತಿಯಲ್ಲಿ ನಾವು ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಹೆಜಮಾಡಿಯಲ್ಲಿ 45 ಲಕ್ಷ ರೂಪಾಯಿಗಳಲ್ಲಿ ಭೂಸ್ವಾಧೀನವನ್ನು ಮಾಡಲಾಗಿದೆ. ಅದರಲ್ಲಿ ಮೀನುಗಾರಿಕೆ ಮತ್ತು ತಂಗುದಾಣಕ್ಕೆ 95 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅಲ್ಲಿ ಸರ್ಕಾರದಲ್ಲಿ ಆಗಲಿ, ನಮ್ಮ ಪ್ರವಾಸೋದ್ಯಮ ಇಲಾಖೆಯಲ್ಲಿಯಾವುದೇ ಭೂಮಿ ಇಲ್ಲ. ಆದರೆ ಮುಂದಿನ

ದಿನಮಾನಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅಲ್ಲಿ ಬಂದರಿನಲ್ಲಿ ಅಭಿವೃದ್ಧಿ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆನ್ನುವ ಮಾಹಿತಿಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ನೀಡಬಯಸುತ್ತೇನೆ.

**ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿಪಡಿಸುವುದು**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 28 (209) ಶ್ರೀ ಪ್ರಭಾಕರ ಬಂಗೇರ. ಕೆ. (ಬೆಳ್ತಂಗಡಿ)

ಮಾನ್ಯ ಪ್ರವಾಸೋದ್ಯಮ ಮತ್ತು ಮೌಲಸೌಲಭ್ಯ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಎಷು ಪ್ರೇಕ್ಷಣೆಯ ಸ್ಥಳಗಳನ್ನು ಪ್ರವಾಸೋದ್ಯ ಇಲಾಖೆ ಗುರುತಿಸಿ ಅಭಿವೃದ್ಧಿ ಪಡಿಸಿದೆ; (ಅವುಗಳ ವಿವರ ಒದಗಿಸುವುದು)

ಆ) ವೇಣೂರು ಗಡಾಯಿಕಲ್ಲು, ಶಿಶಿಲ, ಪಶ್ಚಿಮಘಟ್ಟಗಳ ಪರ್ವತ ಶ್ರೇಣಿಗಳಲ್ಲಿ ಪ್ರವಾಸೋದ್ಯಮ ಇಲಾಕೆಯು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ವಿವರಗಳೇನು;

ಇ) ಕರಾವಳಿ ಜಿಲ್ಲೆಗಳಲ್ಲಿ ಅಭಿವೃದ್ಧಿ ಪಡಿಸದೇ ಇರುವ ಪ್ರವಾಸೋದ್ಯಮ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಕ್ರಮಗಳೇನು.

**ಶ್ರೀ ಶ್ರೀರಾಮುಲು ಪ್ರವಾಸೋದ್ಯಮ ಮತ್ತು ಮೌಲಸೌಲಭ್ಯ ಅಭಿವೃದ್ಧಿ ಸಚಿವರು**

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಇಲಾಖೆಯು ಧರ್ಮಸ್ಥಳ ಹಾಗೂ ವೇಣೂರುಗಳನ್ನು ಪ್ರವಾಸಿ ಸ್ಥಳಗಳೆಂದು ಪ್ರವಾಸೋದ್ಯಮ ನೀತಿಯಡಿ ಗುರುತಿಸಲಾಗಿದೆ. ವೇಣೂರು ಹಾಗೂ ಧರ್ಮಸ್ಥಳಗಳನ್ನು ಜೈನ್ ಸರ್ಕ್ಯೂಟ್‌ನ ಅಡಿ ಪ್ರಚಾಪಡಿಸಿ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಈ ಹಿಂದೆಯೇ ಕ್ರಮ ತೆಗೆದುಕೊಳ್ಳಲಾಗಿದೆ.